ದಿನಾಂಕಃ **01.06.2024** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ಹೆಚ್.ಎನ್.ವಿ ರವರಿಂದಃ

ಈ ದಾವೆ ಸಲ್ಲಿಸುವ ಪೂರ್ವದಲ್ಲಿ ಪ್ರತಿವಾದಿಗಳ ವಿರುದ್ಧ ನಾನು ಮತ್ತೊಂದು ದಾವೆಯನ್ನು ಸಲ್ಲಿಸಿದ್ದೆ ಎಂದರೆ ಸರಿ. ಸದರಿ ದಾವೆಯ ಕ್ರಮ ಸಂ. ಒ.ಎಸ್ ನಂ.**6695/2006** ಆಗಿರುತ್ತದೆ. ಸದರಿ ದಾವೆಯು ಈಗಾಗಲೆ ವಜಾಗೊಂಡಿರುತ್ತದೆ. ದಾವೆ ಜಾಗೊಂಡ ಆಜ್ಞೆಯ ವಿರುದ್ಧ ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ.

ಸರ್ವೆ ನಂ.**42** ಜಮೀನಿನ ಒಟ್ಟು ವಿಸ್ತೀರ್ಣ **2** ಎಕರೆ **2** ಗುಂಟೆ ಆಗಿರುತ್ತದೆ. ಸದರಿ ಜಮೀನಿನ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ. ನನ್ನ ವಿಕ್ರಯದಾರ ಮೊಹಮ್ಮದ್ ಫಾರುಕ್ ರವರಿಗೆ ಸರ್ವೆ ನಂ.**42** ಜಮೀನು ಯಾವ ರೀತಿ ಬಂದಿರುತ್ತದೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆಯನ್ನು ನೀಡಿರುತ್ತೇನೆ. ಸದರಿ ಜಮೀನಿನ ಸಂಬಂಧಿಸಿ ನನ್ನ ವಿಕ್ರಯದಾರರಿಗೆ ಆದ ನಿಪಿ-**11** ಕ್ರಯ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನನ್ನ ವಿಕ್ರಯದಾರಾದ ಮೊಹಮ್ಮದ್ ಫಾರುಕ್ ರವರ ವಿಕ್ರಯದಾರಿಗೆ ನಿಪಿ-**11** ರೀತಿಯ ಕ್ರಯ ಪತ್ರವನ್ನು ಬರೆದುಕೊಡಲು ಯಾವ ರೀತಿಯ ಹಕ್ಕು ಇರುತ್ತದೆ ಎನ್ನುವ ವಿಷಯವನ್ನು ತಿಳಿದುಕೊಂಡಿಲ್ಲ ಆದರೆ ನನ್ನ ತಂದೆ ನನ್ನ ತಂದೆ ಎಲ್ಲಾ ವಿಷಯವನ್ನು ಪರಮಾಶಿಸಿರುತ್ತಾರೆ. ನನ್ನ ತಂದೆ

ಈಗ ಜೀವಂತ ಇರುವುದಿಲ್ಲ. ಸರ್ವೆ ನಂ.**42/65** ಜಮೀನಿನ ಚೆಕ್ಕುಬಂದಿ ನನಗೆ ಹೇಳಲು ಆಗುವುದಿಲ್ಲ. ನಿಪಿ-**12** ಕ್ರಯ ಪತ್ರವನ್ನು ದಾವಾ ಸ್ವತ್ತು ಯಾವ ರೀತಿ ನನಗೆ ಬಂದಿರುತ್ತದೆ ಎಂದು ಸಾಬೀತು ಪಡಿಸಲು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನಿಪಿ-**12** ಕ್ರಯ ಪತ್ರದಲ್ಲಿ ಸರ್ವೆ ನಂ.**42/49** ಜಮೀನು ವಿಕ್ರಯಗೊಂಡಿರುತ್ತದೆ. ಸರ್ವೆ ನಂ.**42** ಜಮೀನು ಒಟ್ಟು **160** ಎಕರೆ ವಿಸ್ತೀರ್ಣ ಇರುತ್ತದೆ ಎನ್ನುವ ವಿಷಯವನ್ನು ನಾನು ತಿಳಿದುಕೊಂಡಿರುವುದಿಲ್ಲ. ಆದರೆ ನನ್ನ ತಂದೆ ಸದರಿ ವಿಷಯವನ್ನು ತಿಳಿದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತನ್ನು ಮೊಹ್ಮದ್ **?**ಫಾರುಕ್ ರವರು ಸೈಟಾಗಿ ವಿಗಂಡನೆ ಮಾಡಿ ನಮಗೆ ಮಾರಾಟ ಮಾಡಿರುತ್ತಾರೆ ಅದಕ್ಕೆ ಸಂಬಂಧಿಸಿದ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನಾನು ಈ ಮೇಲೆ ಹೇಳಿದಂತಹ ಯಾವುದೇ ದಾಖಲೆಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದ ಲೇಔಟ್ ಪ್ಲಾನ್ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನಾನು ನನ್ನ ವಿಕ್ರಯದರಾದ ಒಟ್ಟು **5520** ಚದುರ ಅಡಿ ಭೂಮಿಯನ್ನು ಖರೀದಿಸಿರುತ್ತೇನೆ. ಸದರಿ ವಿಸ್ತೀರ್ಣ ಜಮೀನಿಗೆ ಸಂಬಂಧಿಸಿ ಯಾವ ಯಾವ ದಾಖಲೆಗಳನ್ನು ಪರಮಾರ್ಶಿಸಿರುತೀರೆ ಎನ್ನುವ ಪ್ರಶ್ನೆಗೆ

ಸಾಕ್ಷಿಯು ನನ್ನ ತಂದೆಯು ಎಲ್ಲಾ ದಾಖಲೆಗಳನ್ನು ಪರಮಾರ್ಶಿಸಿರುತ್ತಾರೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿರುತ್ತಾರೆ ಕಾಲವಕಾಶ ನೀಡಿಲಾಯಿತು.

ಮರು ವಿಚಾರಣೆಃ ಇಲ್ಲ
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು)

ಓ. ಹೇ.ಕೇ.ಸ.ಇದೆ.

**(ಓಂಕಾರಪ್ಪ. ಆರ್.)**
**5** ನೇ ಅ.ನ.ಸಿ.ಸಿ. ನ್ಯಾಯಾಧೀಶರು,
ಬೆಂಗಳೂರು ನಗರ.